ಶ್ರೀ ಅರವಿಂದ ಲಿಂಬಾವಳಿ: ಮೊದಲನೆಯದಾಗಿ land issue solve ಆದರೆ ಕೂಡಲೇ ಕಟ್ಟಡ ಕೆಲಸ ಪ್ರಾರಂಭ ಮಾಡುತ್ತೇವೆ. ಎರಡನೆಯದಾಗಿ ಜಿಲ್ಲಾ ಆಸ್ಪತ್ರೆ ಎಂದು ಟ್ರೀಟ್ ಮಾಡಿ, ಈಗಿರುವ ಆಸ್ಪತ್ರೆಯಲ್ಲಿ ಏನೇನು ನ್ಯೂನತೆಗಳಿದೆಯೋ, ಅದನ್ನು ಸರಿಪಡಿಸುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಡಾ॥ ಮಾಲಕರೆಡ್ಡಿ ಎ.ಬಿ.: ಈಗಿರುವ ಕಟ್ಟಡ ಬಹಳ strong ಇದೆ. ಈ ಆಸ್ಪತ್ರೆ ಹಿಂದೆಯೇ ಸರ್ಕಾರದ 3 ಎಕರೆ ಜಾಗವಿದೆ, ಅದು ಸಾಕಲ್ಲವೇ?

ಶ್ರೀ ಅರವಿಂದ ಲಿಂಬಾವಳಿ: land issue ಇತ್ಯರ್ಥವಾಗಲಿ, ಎಲ್ಲಾ ಸಮಸ್ಯೆ ಬಗೆಹರಿಯುತ್ತದೆ.

ಅಧ್ಯಕ್ಷರು: ಮಾಲಕರೆಡ್ಡಿಯವರೇ, ಅರ್ಥ ಮಾಡಿಕೊಳ್ಳಿ

ಡಾ॥ ಮಾಲಕರೆಡ್ಡಿ ಎ.ಬಿ.: ಮಾಹಿತಿ ಅಲ್ಲ, ಸ್ಥಳಾವಕಾಶ ಇದೆ. ಆದರೆ, ನಿಮಗೆ ಕೆಲಸ ಮಾಡುವುದಕ್ಕೆ political will ಇಲ್ಲ.

ಶ್ರೀ ಅರವಿಂದ ಲಿಂಬಾವಳಿ: ನಮಗೆ ಕೆಲಸ ಮಾಡುವುದಕ್ಕೆ political will ನಮ್ಮ ಸರ್ಕಾರಕ್ಕಿದೆ. ಖಂಡಿತವಾಗಿಯೂ ಕೆಲಸ ಮಾಡುತ್ತೇವೆ.

ಅಧ್ಯಕ್ಷರು: ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸುವುದು

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು): ದಿನಾಂಕ 25–07–2012ರ 3ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 125 ಪ್ರಶ್ನೆಗಳ ಪೈಕಿ 97 ಪ್ರಶ್ನೆಗಳ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

(ಅನುಬಂಧ–1)

ಅಧ್ಯಕ್ಷರು: ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು

I. ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿ) ಅವರು: ಮಾನ್ಯ ಅಧ್ಯಕ್ಷರೆ,

1976 ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ ಕಲಂ 47(ಎ)ರ ಮೇರೆಗೆ:

1. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಹಾಗೂ 2011–12ನೇ ಸಾಲಿನ ವಾರ್ಷಿಕ ವರದಿ.

ಕಂಪನಿ ಕಾಯ್ದೆ 1956ರ ಪರಿಚ್ಛೇದ 619(ಎ)ರ ಮೇರೆಗೆ

1. ಕರ್ನಾಟಕ ಜೈವಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಸೇವಾ ಸಂಸ್ಥೆ (ಕೆಬಿಟ್ಸ್) 2009–10 ಮತ್ತು 2010–11ನೇ ಸಾಲಿನ ವಾರ್ಷಿಕ ವರದಿ.

ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 25(4)ರ ಪ್ರಕಾರ

1. ಕರ್ನಾಟಕ ಮಾಹಿತಿ ಆಯೋಗದ 2010–11ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

II. ಶ್ರೀ ಕೆ. ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿ): ರವರ ಪರವಾಗಿ

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 262(3)ರ ಮೇರೆಗೆ:

1. ಶಿವಮೊಗ್ಗ ಜಿಲ್ಲಾ ಪಂಚಾಯತ್‌ನ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

III. ಶ್ರೀ ಆರ್. ಅಶೋಕ್ (ಉಪ ಮುಖ್ಯಮಂತ್ರಿ): ರವರ ಪರವಾಗಿ

1950ರ ರಸ್ತೆ ಸಾರಿಗೆ ಸಂಸ್ಥೆ ಅಧಿನಿಯಮ ಕಲಂ 35(2) ಮತ್ತು 33(4)ರ ಪ್ರಕರಣದ ಮೇರೆಗೆ:

1. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ 2010–11ನೇ ಸಾಲಿನ ವಾರ್ಷಿಕ ಆಡಳಿತ ವರದಿ.

2. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 2010–11ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

3. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 2010–11ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಮಂಡಿಸುತ್ತೇನೆ.